# ಮಲಗು ಕಂದ

ಮಲಗು ಕಂದ ಮಲಗು ಕೂಸೆ
ಮಲಗು ನನ್ನ ಜಾಣ ಮರಿಯೆ
ಹಗಲು ಕಳೆದು ಇರುಳು ನೆರೆದು
ನಿದಿರೆದೇವಿ ಬರುವಳಯ್ಯ
ತಾರೆಗಳ ತೋಟದಿಂದ
ಕನಸ ಹೊತ್ತು ತರುವಳಯ್ಯ. ॥ಮಲಗು ಕಂದ॥
ಜೋ.... ಜೋ ಜೋ ಜೋ
ಜೋ.... ಜೋ ಜೋ ಜೋ

ಏನು ಸದ್ದು ಏನು ಮುದ್ದು
ಬೀಗಿ ಮೆರೆವ ಎದೆಯ ಗೆದ್ದು
ಜಗವೆ ಮಲಗಿ ನಿದ್ದೆಗೋಯ್ತು
ಮುಗಿಯದೇನು ನಿನ್ನ ಆಟ!
ಮಲಗು ಚಿನ್ನ, ಮುತ್ತು, ರತ್ನ,
ಪಚ್ಚೆ, ನೀಲ, ಕೆಂಪು, ಧವಳ... ॥ಮಲಗು ಕಂದ॥
ಜೋ.... ಜೋ ಜೋ ಜೋ
ಜೋ.... ಜೋ ಜೋ ಜೋ

ನಗೆಯಲೇನು ದೇವಗಾನ
ನಗುವಿನಲ್ಲಿ ಸುಧೆಯ ಪಾನ
ತೂಗಿ ತೇಲೊ ಕಿಲಕಗಳಲ್ಲಿ
ಕಂದ ಕೇಳೊ ಏನದೆ ಧ್ಯಾನ
ಹಾಳು ಮೂಳು ಕಣ್ಣು ತಾಗಿ
ಉದರಬೇನೆ ಬಾರದಿರಲಿ! ॥ಮಲಗು ಕಂದ॥
ಜೋ.... ಜೋ ಜೋ ಜೋ
ಜೋ.... ಜೋ ಜೋ ಜೋ

ಬಳಲಿಗೊಂಡ ತಾಯ ಸಿರಿಯೆ
ಎದೆಯಲೇಳೊ ಪ್ರೆನ್ನ ತೆರೆಯೆ
ಉಸಿರಿನಲ್ಲಿ ಹಸಿರ ಬಿಡಿಸಿ
ನನ್ನೊಲುಮೆಯ ಗಿಳಿಯ ಗೀತೆ!
ಇಂದು ಸಾಕು ನಾಳೆಗಿರಲಿ
ಮತ್ತೆ ಮೂಡೊ ಉದಯನೊಂದನೆ. ॥ಮಲಗು ಕಂದ॥
ಜೋ.... ಜೋ ಜೋ ಜೋ
ಜೋ.... ಜೋ ಜೋ ಜೋ

* ಬಾಳಗುಣಸೆ ಮಂಜುನಾಥ
ಮೊಬೈಲ್ ನಂ. 8453851507

Scanned with CamScanner